ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ,
ಕುಣಿಗಲ್.

ಸಿ.ಸಿ.ನಂ. 4169/2023

ಸಿ.ಡಬ್ಲ್ಯೂ -08
ಪಿ.ಡಬ್ಲ್ಯೂ-08

ಸಾಕ್ಷಿದಾರನ ಹೆಸರು :- ಬೊತೇಶ್
ತಂದೆಯ ಹೆಸರು :- ಸೋಮೇಲಿಂಗಪ್ಪ
ವಯಸ್ಸು :- 45 ವರ್ಷ
ಉದ್ಯೋಗ :- ಮುಖ್ಯ ಪೇದೆ
ವಾಸ :- ಗುಬ್ಬಿ ಪೊ. ಠಾಣೆ

**ಸಾಕ್ಷಿಗೆ ದಿಃ 22.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

10.03.2006 ರಿಂದ 22.02.2013 ರವರೆಗೆ ಪೇದೆಯಾಗಿ ಅಮೃತೂರು ಪೊ. ಠಾಣೆಯಲ್ಲಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 08.08.2010 ರಂದು ಚಾಸಾ 17 ಅವರು ಚಾಸಾ 15, 16 ಮತ್ತು ನಮ್ಮ ಅಮೃತೂರು ಸಿಬ್ಬಂದಿಗಳು ಅಮೃತೂರು ಠಾಣಾ ಮೊ. ನಂ 104/2010 ಸದರಿ ಪ್ರಕರಣದಲ್ಲಿ ಆರೋಪಿ ಪತ್ತೆಗಾಗಿ ಹೋಗುತ್ತಿರುವಾಗ ರಾತ್ರಿ 9 ಗಂಟೆಯ ಸಮಯಯಲ್ಲಿ 1 ಬೈಕನಲ್ಲಿ 3 ಜನ ಮಾರ್ಕೋನಹಳ್ಳಿ ಹತ್ತಿರ ಇರುವ ಯಾಚನಹಳ್ಳಿ ಬಳಿ ಬರುತ್ತಿದ್ದು ನಾವು ಅಡ್ಡ ಹಾಕಿದಾಗ ಇಬ್ಬರು ಓಡಿ ಹೋಗಿದ್ದು ಒಬ್ಬ ವ್ಯಕ್ತಿ ಸಿಕ್ಕಿರುತ್ತಾನೆ. ಆತನ ಹೆಸರು ಎಸ್. ಕೆ. ಬಾಷಾ @ ಕೃಪಾರಾವ್ ಆಗಿದ್ದು ಅವರ ಒಂದು ಬೈಕ ಮತ್ತು ಕೆಂಪು ಬ್ಯಾಗದಲ್ಲಿ ಒಂದು ಕಾರದ ಪುಡಿಯ ಪ್ಯಾಕೇಟ ಸ್ಕ್ರೂ ಡ್ರೈವರ್ ಹಾಗೂ ಕೀ ಬೆಂಚ್, 1 ಕಟ್ಟಾಗಿರು ಚೈನ್, 2 ಬೆಳ್ಳಿಯ ದೀಪ ಇದ್ದು ಅವರನ್ನು ಚಾಸಾ 17 ಅವರು ವಶಕ್ಕೆ ಪಡೆದು ನಂತರ ಅಕ್ಕಸಾಲಿಗರನ್ನು ಕರೆಸಿ ಅವುಗಳನ್ನು ತೂಕ ಮಾಡಿಸಿರುತ್ತಾರೆ. ಮಹಜರನ್ನು ರಾತ್ರಿ 10 ರಿಂದ 11 ಗಂಟೆಯವರೆಗೆ ಮಾಡಿದ್ದು ಆ ಸಮಯದಲ್ಲಿ ನಾನು ಸಹಿ ಮಾಡಿರುತ್ತೇನೆ. ನನ್ನ ಸಹಿ ಇರುವ ಪಂಚನಾಮೆಯನ್ನು ಈಗ ನೋಡುತ್ತಿದ್ದು ಅದನ್ನು ನಿ.ಪಿ 5(ಡಿ) ಎಂದು ಗುರುತಿಸಲಾಯಿತು.

**ಆರೋಪಿತರ ಪರಃ ಪಾಟೀ ಸವಾಲುಃ ವಾಯ..ಎ. ಎಂ. ವಕೀಲರಿಂದಃ**

ಆರೋಪಿ ಪತ್ತೆ ಕುರಿತು ಅಪರಾದ ನಂ 104/2010 ರಲ್ಲಿನನಗೆ ಯಾವುದೇ ಲಿಖಿತ ಆದೇಶ ನೀಡಿರುವುದಿಲ್ಲ. ದ್ವಿ ಚಕ್ರ ವಾಹನದ ನಂ ಕೆ.ಎ 06- ಡಬ್ಲ್ಯೂ 533 ಕಪ್ಪು ಮತ್ತು ನೀಲ ಬಣ್ಣದ್ದು ಆಗಿರುತ್ತದೆ. ಮಹಜರನ್ನು ಠಾಣೆಯಲ್ಲಿಯೇ ಸೃಷ್ಟಿ ಮಾಡಿಲಾಗಿದೆ ಎಂದರೆ ಸರಿಯಲ್ಲ. ಸದರಿ ವ್ಯಕ್ತಿಯ ಬಳಿ ಕೆಂಪು ಬ್ಯಾಗದಲ್ಲಿ ಒಂದು ಕಾರದ ಪುಡಿಯ ಪ್ಯಾಕೇಟ ಸ್ಕ್ರೂ ಡೈವರ್ ಹಾಗೂ ಕೀ ಬೆಂಚ್, 1 ಕಟ್ಟಾಗಿರು ಚೈನ್, 2 ಬೆಳ್ಳಿಯ ದೀಪ ಇದ್ದು ಅವರನ್ನು ಚಾಸಾ 17 ಅವರು ವಶಕ್ಕೆ ಪಡೆದಿಲ್ಲವೆಂದರೆ ಸರಿಯಲ್ಲ. ಠಾಣಾಧಿಕಾರಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.